

ಮಲೈಕಾ ಅರೋರ ಖಾನ್ ಯಾರಿಗೆ ಗೊತ್ತಿಲ್ಲ? ಮುಖವನ್ನು ತೆಗೆದು ಆಚೆಗಿಟ್ಟರೂ ಸಿನಿಪ್ರಿಯರು ಗುರುತಿಸುವಂಥ 'ಮೌಲ್ಯ'ಯುತ ವ್ಯಕ್ತಿತ್ವ. ಈಗ 13 ಲಕ್ಷ ಡಾಲರ್ ಬೆಲೆಯ, 500 ಕ್ಯಾರಟ್ ಅಪ್ಪಟ ವಜ್ರಗಳ ಬಸ್ಟಿಯರ್ (ಮೈಗೆ ಅಂಟಿಕೊಳ್ಳುವ ರವಿಕೆ) ತೊಟ್ಟು ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾರೆ.



ಹಾಲಿವುಡ್ ಚಿತ್ರದ ಮೋಸ್ಟ್ ಡೇಂಜರಸ್ ದೃಶ್ಯದ ಪುನರಾವರ್ತನೆ. ಅಲ್ಲಿ ಲೇಡಿ ಜೇಮ್ಸ್‌ಬಾಂಡ್ ಚಟ್ ಚಟ್ ಎಂದು ಗುಂಡು ಹಾರಿಸಿದರೆ, ಈ ಅಲಬಾಮಾದ 69 ವರ್ಷದ ಮಹಿಳೆ ಮನೆಗೆ ನುಗ್ಗಿದ ದರೊಡೆಕೋರರ ಮೇಲೆ ಸೀದಾ ಗುಂಡು ಹಾರಿಸಿ ಮಟಾಷ್ ಮಾಡಿಯೇ ಬಿಟ್ಟಳು. ಅದೂ ಒಂದೇ ಟೇಕ್‌ಗೆ. ಸಿಸಿ ಟಿವಿ ಕ್ಯಾಮೆರಾ ಬೇರೆ ಕಾದು ಕುಳಿತಿತ್ತು ದೃಶ್ಯ ಸೆರೆಹಿಡಿಯಲು.

ಶೂಟರ್
ಸಂಜೀವ್ ರಜಪೂತ್ ಇಲಿಯ ಹಿಂದೆ ಬಿದ್ದಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟದ ಕನಸನ್ನು ಹರಿದಿದ್ದು ಒಂದು ಇಲಿಯಂತೆ. ಆ ಇಲಿ ಕಚ್ಚಿ, ಅದಕ್ಕೆ ಪಡೆದ ಚುಚ್ಚುಮದ್ದಿನಿಂದ ಜ್ವರ ಬಂದು ಆಯ್ಕೆ ಸುತ್ತಿನಲ್ಲೇ ಮುಗ್ಗರಿಸಬೇಕಾಯ್ತು. ಈಗ ರಜಪೂತ್ ನೀಡಿದ ದೂರನ್ನು ಕ್ರೀಡಾಕೂಟದ ಅಧಿಕಾರಿಗಳು ಗಂಭೀರವಾಗಿ ತೆಗೆದುಕೊಂಡು ಕ್ರೀಡಾಕೂಟ ನಡೆಯುವ ದೆಹಲಿಯಲ್ಲಿ ಇಲಿ ಬೇಟೆ ಆರಂಭಿಸಿದ್ದಾರೆ.

ಬಳ್ಳಿಗೆ ಕಾಯಿ ಭಾರವೇ? ಅದು ಕುಂಬಳಕಾಯಿಯನ್ನಾದರೂ ಹೊರುತ್ತದೆ. ಚೀನಾದ ಈ 10 ತಿಂಗಳ ಮಗು ಈಗಾಗಲೇ 20 ಕೆಜಿ ತೂಗುತ್ತಿದೆ. ಅಂದರೆ 6 ವರ್ಷದ ಬಾಲಕನ ತೂಕಕ್ಕೆ ಸಮ. ವೈದ್ಯರು ಎಷ್ಟು ತಲೆ ಕೆಡಿಸಿಕೊಂಡರೂ ತೂಕದ ಹಿಂದಿನ ರಹಸ್ಯ ಮಾತ್ರ ಬಯಲಾಗುತ್ತಿಲ್ಲ. ಒಂದೇ ಮಗು ಎಂದು ನಿಯಮವಿರುವ ಚೀನಾದಲ್ಲಿ ಮೂರು ಮಕ್ಕಳ ತೂಕ ಇದೊಂದಕ್ಕೇ ಹಂಚಿದ್ದು ಸಹಜ ಬಿಡಿ.





'ಹೆಚ್ಚು ಧೂಮಪಾನ ಮಾಡಿ, ಡ್ರಂಗಟ್ಟಲೆ ಮದ್ಯ ಸೇವಿಸಿ' ಸ್ಲೋಗನ್ ಕೇಳಿ ನರ್ತಿಸಲು ರಸ್ತೆಗೆ ಧಾವಿಸಬೇಡಿ. ಇದು ರಷ್ಯಾದಲ್ಲಿ ಹಣಕಾಸು ಸಚಿವರು ಜನಕ್ಕೆ ಮಾಡಿದ ಮನವಿ. ಸಿಗರೇಟ್, ವೋಡ್ಕಾಗೆ ತೆರಿಗೆ ಹೆಚ್ಚು ಹಾಕಿ ಸರ್ಕಾರದ ಖಜಾನೆ ಭರ್ತಿ ಮಾಡುವ ಆಲೋಚನೆ ಆ ಸಚಿವರದ್ದು. ಆ ಹಣವನ್ನು ಕುಸಿಯುತ್ತಿರುವ ಜನಸಂಖ್ಯೆ ಹೆಚ್ಚಿಸಲು ಬಳಸುವರಂತೆ. ಅವರು ಆರೋಗ್ಯ ಸಚಿವರ ಸಲಹೆ ತೆಗೆದುಕೊಂಡಿಲ್ಲ. ದಮ್ಮು, ಡ್ರಮ್ಮು ಎರಡೂ ಸೇರಿದರೆ ಕೃತಕ ಗರ್ಭದಾನಕ್ಕೆ ಇನ್ನಷ್ಟು ಹಣ ಹಾಕಬೇಕೆಂಬುದು 'ಅರ್ಥ ಸಚಿವ'ರಿಗೇನು ಗೊತ್ತು?

ಮಾಯಾಂಗನೆಯರಿಗೆ ಮಾತ್ರ ಮಾರ್ಜಾಲ ನಡಿಗೆ ಮೀಸಲಾ? ಅದರ ಪೇಟೆಂಟ್ ನಮ್ಮದೇ ಎಂದು ಅಮೆರಿಕದ ಈ ಬೆಕ್ಕು ಲೊರೆಂಜೊ ಸಾಬೀತುಪಡಿಸ ಹೊರಟಿದೆ. ಬಣ್ಣದ ಅಂಗಿ ತೊಟ್ಟು ಕ್ಯಾಮೆರಾ ಮುಂದೆ ಕುಳಿತು, ನಿಂತು ಮಾಡುವುದೆಂದರೆ ಇದಕ್ಕೆ ಖುಷಿಯಂತೆ. ಒಂದು ದಿನ ಕ್ಯಾಮೆರಾ ಫ್ಲ್ಯಾಷ್ ಬೆಳಕು ಬೀಳದಿದ್ದರೆ ಮುನಿಸಂತೆ. ವಯಸ್ಸಾದ ಮೇಲೆ ಏನು ಮಾಡುತ್ತದೋ?



ಮಿಯಾಮಿಯಲ್ಲಿ ನಾಯಿಗಳಿಗೆಂದೇ ಥೀಮ್ ಪಾರ್ಕ್ ಇದೆ. ಅಲ್ಲಿ ಅವುಗಳಿಗೆಂದೇ ಈಜುಕೊಳ, ಬಸ್ಸು.. ಎಲ್ಲವೂ. ನಿತ್ಯ 25- 30 ನಾಯಿಗಳ ಬೌಬೌ. ಬಸ್ಸಲ್ಲಿ ಸೀಟಿನ ಮೇಲೆ ಮಲಗಿ, ಎದ್ದು ಏನೆಲ್ಲಾ ಮಾಡುವ ನಾಯಿಗಳದ್ದೇ ಅದೃಷ್ಟ.